ಅಳಿಸುವ ಒಂದು ದ್ರವ. ಅದರಲ್ಲಿ ಒಂದು ಮಾದಕ ವಸ್ತು ಇದೆ. ಅದನ್ನು ಅವರು ಇನ್ ಹೇಲ್ ಮಾಡಿದರೆ, ನಶೆಗೆ ಒಳಗಾಗುತ್ತಾರೆ ಎಂದು ರಾಜಶೇಖರ ವಿವರಿಸಿದ. ಈ ಮಕ್ಕಳು ರೈಲ್ವೆ ಡಬ್ಬಿಯಲ್ಲಿ ಕಸಬಳಿದು ಅದರ ದುಡ್ಡಿನಿಂದ ಇಂಥಹ ಇರೇಜರ್ ಕೊಂಡುಕೊಳ್ಳುತ್ತಾರೆ ಎಂದು ಹೇಳಿದ. ಅಂತಹ ಮಕ್ಕಳನ್ನು ಬಬಿತಾ ಫೌಂಡೇಶನ್ನಲ್ಲಿ ಒಂದು ವರ್ಷದವರೆಗೆ ಊಟ, ವಸತಿ, ಶಿಕ್ಷಣ ಕೊಟ್ಟು ಮಾದಕ ದ್ರವ್ಯದ ವ್ಯಸನದಿಂದ ಮುಕ್ತ ಮಾಡಿ ಇವರನ್ನು ಮನೆಗೆ ತಲುಪಿಸುವ ಜವಾಬ್ದಾರಿ ನಮ್ಮ ಮೇಲೆ ಇದೆ ಎಂದ.

ಇದೆಲ್ಲ ಬಬಿತಾಗೆ ಗೊತ್ತಿರುವ ವಿಷಯವೇ ಆದರೂ ಇವನನ್ನು ನೋಡಿ, ರಾಜಶೇಖರ ಸ್ವಲ್ಪ ಜಾಸ್ತಿಯೇ ಹೇಳಿದ. ಬಬಿತಾ ಮತ್ತೆ ಹೇಳಿದಳು– ನೀವು ಬರೀ ಹತ್ತು ಪರ್ಸೆಂಟ್ ಕವರ್ ಮಾಡ್ತಾ ಇದ್ದೀರಿ. ಇಂತಹ ಮಕ್ಕಳು ಎರಡು ಸಾವಿರ ಜನ ಇದ್ದಾರೆ ಎಂದು ರಿಪೋರ್ಟ್ ಇದೆ ಎಂದು ಘರ್ಜಿಸಿದಳು. ಮತ್ತೆ ನಮ್ಮ ಈ ಕಟ್ಟಡದಲಿ, ನಾಲ್ಕು ಸಾವಿರ ಮಕ್ಕಳನ್ನು ಅಕಾಮಡೇಟ್ ಮಾಡಬಹುದು ಎಂದೂ ಹೇಳಿದಳು. ಇನ್ನು ಆರು ತಿಂಗಳಲ್ಲಿ ಮಾಡುತ್ತೇವೆ ಮೇಡಮ್ ಎಂದು ವಿನಮ್ರ ವಿದ್ಯಾರ್ಥಿಯಂತೆ ರಾಜಶೇಖರ್ ಹೇಳಿದ. ಮತ್ತೆ ಮಕ್ಕಳನ್ನು ಮನೆಗೆ ಕಳಿಸಿದ ಮೇಲೆ ನಾವು ನಿರಂತರ ಸಂಪರ್ಕದಲ್ಲಿದ್ದೇವೆ. ಮಕ್ಕಳು ಅಲ್ಲಿ ಶಾಲೆಗೆ ಹೋಗಲು, ಪಾಲಕರ ಜೊತೆ, ಹೊಂದಿಕೊಂಡು ಹೋಗಲು ಮತ್ತೆ ಮರಳಿ ಇಲ್ಲಿಗೆ ಬಾರದಿರಲು, ನಮ್ಮ ಫೌಂಡೇಶನಲ್ಲೆ ತರಬೇತಿ ಕೊಟ್ಟಿರುತ್ತೀವಲ್ಲ... ಅದು ನಿಜಕ್ಕೂ ಸಹಾಯಕ್ಕೆ ಬಂದಿದೆ ಎಂದು ಹೇಳಿದ. 'ಇಲ್ಲಿಯ ಎಲ್ಲಾ ಬುಕ್ ಸ್ಟಾಲ್‌ಗಳಿಗೆ ಹೇಳಿದ್ದೇವೆ. ಪಾಲಕರ ಜೊತೆ ಬಂದರೆ ಮಾತ್ರ ಇರೇಜರ್ ಕೊಡಿ. ಇಲ್ಲದಿದ್ದರೆ ಬೇಡ ಎಂದು ಸೋಲಾಪುರದಿಂದ ಗುಂತಕಲ್‌ವರೆಗೆ ಅಭಿಯಾನ ಮಾಡಿದ್ದೀವಿ ಮೇಡಮ್' ಎಂದ.

ಇವನು ಕೂಡಲೇ ಹೊರಗೆ ಓಡಿಬಂದ. ಅಲ್ಲಿಯೇ ನಿಂತ ಒಬ್ಬನನ್ನು ಕೇಳಿದ, 'ಈ ಮೇಡಮ್ ಯಾರು?' ಎಂದು. ಅವನು ತಟ್ಟನೆ ಹೇಳಿದ, 'ಅವರು ಬಬಿತಾ ಭೂಮಿ ಫೌಂಡೇಶನ್ ಎಂ.ಡಿ. ಇವರ ಗಂಡ ದೊಡ್ಡ ಇಂಡಸ್ಟ್ರಿಯಲಿಸ್ಟ್. ರೈಲ್ವೆ ಮಕ್ಕಳಿಗಾಗಿ ಇಡೀ ಭಾರತದ ತುಂಬಾ ಕೆಲಸ ಮಾಡುತ್ತಾರೆ' ಎಂದು.



ಅವಳ ಮೀಟಿಂಗ್‌ಗಳು ನಡೆದೇ ಇದ್ದವು. ಮಧ್ಯಾಹ್ನದ ಊಟ ಅದೇ ಮಕ್ಕಳ ಜೊತೆ ಆಯಿತು. ಇನ್ನೂ ಊಟದಲ್ಲಿ ಸುಧಾರಣೆ ಆಗಲು ದ್ವಿದಳ ಧಾನ್ಯ, ತತ್ತಿ ಅವರಿಗೆ ಏನು ಬೇಕು ಅದನ್ನು ಕೊಡಿ ಎಂದು ಹೇಳಿದಳು. ದಿನಾಲೂ ಪೂರ್ಣ ಹಾಲಿನಿಂದ ಚಹಾ, ಬೋರ್ನ್‌ವಿಟಾ, ಬೂಸ್ಟ್ ಏನಾದರೂ ಮಾಡಿಕೊಡಿ. ಕೊಠಡಿಗಳನ್ನು ದಿನಾಲು ಎರಡು ಸಲ ಫಿನಾಯಿಲ್‌ನಿಂದ ತೊಳೆಯಿರಿ, ವರ್ಷಕ್ಕೆ ನಾಲ್ಕು ಜೊತೆ ಬಟ್ಟೆ, ಟವೆಲ್, ಸೋಪು ಅವರಿಗೆ ಏನು ಬೇಕೋ ಅದನ್ನೆಲ್ಲಾ ಕೊಡಿ ಎಂದು ಹೇಳಿದಳು.

ಈಗ ಆ ಎರಡುನೂರು ಮಕ್ಕಳು, ಸೆಕ್ಯೂರಿಟಿಯವರು ಶಿಕ್ಷಕರು, ಕೌನ್ಸಿಲರ್‌ಗಳ ಮೀಟಿಂಗ್ ಆರಂಭವಾಯಿತು. ತಾಯ್ತನದ ಹಂಬಲದಿಂದ ಬಿಡಿಸಿಕೊಂಡು ಬಂದ ಮಕ್ಕಳಿಗೆ ಬಬಿತಾ ನಿಜವಾದ ತಾಯಿಯಾಗಿದ್ದಳು. ಅಯ್ಯೋ ಶಿವನೆ, ಬಬಿಯ ಈ ವಿಕಾಸವಾದ ತನ್ನ ಕಲ್ಪನೆಗೂ ಮೀರಿದ್ದು ಎಂದುಕೊಂಡ ಅವನು. ಯೂನಿವರ್ಸಿಟಿಯಲ್ಲಿ ಆ ದಟ್ಟವಾಗಿ ಬೆಳೆದು ನಿಂತ ಬ್ಯಾಂಬೋ ಮರದ ಕೆಳಗೆ ಸಿನಿಮಾದ ಸಂಭಾಷಣೆಗಳಂತೆ ಮಾತಾಡುತ್ತಿದ್ದ ಮಾತುಗಳನ್ನು ನೆನೆದ. ನಾನು ನೀನಿಲ್ಲದಿದ್ದರೆ ಸಾಯುವೆ, ಸೂರ್ಯನನ್ನು ಚಂದ್ರನನ್ನು ಭೂಮಿಗೆ ತರುವೆ; ಇಬ್ಬರು ವಿಷ ಕುಡಿದು ಸಾಯೋಣ... ಇಂಥಹ ಮಾತುಗಳು ಆಕೆಯ ಈ ಕೆಲಸದ ಮುಂದೆ ಕ್ಷುಲ್ಲಕವೆನಿಸಿದವು. ಇದರ ಮಧ್ಯ ಇವನಿಗೆ ಬಿಸಿ ಬಿಸಿಯಾದ ಚಹಾ ತಂದುಕೊಟ್ಟರು. ಯಾರೋ ಈಕೆಯ ಸಹೋದ್ಯೋಗಿ ಈಕೆಯ ಇಷ್ಟವಾದ ಜೋಳದ ಸೀತೆನಿ ತಂದುಕೊಟ್ಟರು.

ಚಹಾ ಕುಡಿಯುತ್ತ ಮಕ್ಕಳ ಜೊತೆ ನೇರವಾಗಿ ಸಂವಹನ ನಡೆಸಿದಳು. ಎಲ್ಲಾ ಮಕ್ಕಳು ನಾವು ಮುಂದೆ ಶಾಲೆ ಕಲಿಯುತ್ತೇವೆ. ಸಂತೋಷವಾಗಿದ್ದೇವೆ. ಇಲ್ಲಿಯ ಕೋರ್ಸ್ ಮುಗಿಸಿ, ಮನೆಗೆ ಹೋಗಿ ಪಾಲಕರೊಂದಿಗೆ ಇರುತ್ತೇವೆ ಎಂದು ಹೇಳುತ್ತಿರುವಾಗಲೇ ಹದಿನೆಂಟು ವರ್ಷದ ಹುಡುಗ ಮತ್ತು ಹದಿನಾರು ವರ್ಷದ ಹುಡುಗ